ಮಾನ್ಯ ಸದಸ್ಯರುಗಳಿಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು. ನಂತರ ಬೇಕಾದರೆ ಇದರ ಬಗ್ಗೆ ಸಾಯಂಕಾಲ ಎಲ್ಲರೂ ಕುಳಿತುಕೊಂಡು ಮಾತನಾಡೋಣ.

Mr.SPEAKER: We will take it up on some other day. Iam promising you. ನೀವೇ ಇದಕ್ಕೆ ಪ್ರೋತ್ಸಾಹ ಕೊಡದಿದ್ದರೆ ಹೇಗೆ? ಮುಂದಿನ ಬುಧವಾರದ ದಿವಸ ಉಳಿದಿರುವ ಮೂರು ಪ್ರಶ್ನೆಗಳನ್ನು ಪ್ರಶ್ನೋತ್ತರದ ಮೊದಲಿನಲ್ಲಿಯೇ ತೆಗೆದು ಕೊಳ್ಳುತ್ತೇನೆ.Please excuse me.

ಈಗ ಶೂನ್ಯ ವೇಳೆ. ಬಹಳಷ್ಟು ಮಾನ್ಯ ಸದಸ್ಯರು ವಿಷಯಗಳನ್ನು ಪ್ರಸ್ತಾಪಿಸಲು ಸೂಚನಾ ಪತ್ರಗಳನ್ನು ಕಳುಹಿಸಿಕೊಟ್ಟಿದ್ದು, ಈ ಪೈಕಿ ಬಹಳ ಮುಖ್ಯವಾಗಿರುವ ಮೂರು ವಿಷಯಗಳನ್ನು ಪ್ರಸ್ತಾಪಿಸಲು ಅನುಕ್ರಮವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್. ಪಿ.ಜಿ.ಆರ್.ಸಿಂಧ್ಯ ಮತ್ತು ಶ್ರೀ ಭಕ್ತ ವತ್ಸಲಂ ಅವರಿಗೆ ಅವಕಾಶ ಕೊಡುತ್ತಿದ್ದು. ತಾವುಗಳು ಅರ್ಧ ಗಂಟೆಯೊಳಗೆ ಸಂಕ್ಷಿಪ್ತವಾಗಿ ಮಾತನಾಡಿ ಮುಗಿಸಬೇಕು.

(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ಸದಸ್ಯರು ತಂತಮ್ಮ ಪೀಠಗಳಿಗೆ ಹಿಂತಿರುಗಿದರು)

ಶ್ರೀ ಕೆ.ಬಿ. ಕೋಳಿವಾಡ: ಮಾನ್ಯ ಅಧ್ಯಕ್ಷರೇ, ರಾಣಿಬೆನ್ನೂರಿನಲ್ಲಿನ ಕಾನೂನು ಹಾಗೂ ಸುವ್ಯವಸ್ಥೆ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವ ಸಲುವಾಗಿ ನಾನು ಸಹ ತಮಗೆ ಸೂಚನಾ ಪತ್ರ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು: ತಾವು ಕಳುಹಿಸಿರುವ ಪತ್ರ ನನಗಿನ್ನೂ ಬಂದಿಲ್ಲವಾದ್ದರಿಂದ ತಮ್ಮ ಪತ್ರವನ್ನು ಓದಿ ನೋಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಅ): ರಾಜ್ಯದಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರೈತರು ಬೆಳೆದಿರುವ ಗೋವಿನ ಜೋಳವನ್ನು ಸರ್ಕಾರ ಖರೀದಿಸುವ ಕುರಿತು.

+ಶ್ರೀಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ರೈತರು ಬೆಳೆದಿರುವ ಗೋವಿನ ಜೋಳವನ್ನು ಖರೀದಿಸಲು ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆದು, ರೈತರ ಸಂಕಷ್ಟವನ್ನು ಪರಿಹರಿಸುವ ಕುರಿತು ಸಾಕಷ್ಟು ಚರ್ಚೆಯಾಗಿದ್ದು, ಚರ್ಚೆ ಇನ್ನೂ ನಡೆಯುತ್ತಿದೆ. ಇಲ್ಲಿ ಪ್ರಮುಖವಾದ ವಿಚಾರವೇನೆಂದರೆ, ಗೋವಿನ ಜೋಳವನ್ನು ಖರೀದಿಸಲು ಕಳೆದ ಫೆಬ್ರುವರಿ ತಿಂಗಳ 28 ನೇ ತಾರೀಖು ಕೊನೆಯ ತಾರೀಖಾಗಿದ್ದು, ಮತ್ತೆ ಒಂದು ತಿಂಗಳ ಕಾಲ ವಿಸ್ತರಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಶಾಸಕರುಗಳು ಮೊನ್ನೆ ದಿವಸ ಧರಣಿ ಕುಳಿತರು. ಅನಂತರ, ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರ, ಆಹಾರ ಮತ್ತು ಪಡಿತರ ಸಚಿವರಾದ ಶ್ರೀ ಶಾಂತ್‌ಕುಮಾರ್ ಅವರೊಂದಿಗೆ ದೂರವಾಣಿ ಕರೆ ಮಾಡಿ ನಾನು ಮಾತನಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪುನಃ ಒಂದು ತಿಂಗಳ ಕಾಲ ಅಂದರೆ, 31 ನೇ ತಾರೀಖಿನ ವರೆಗೆ ಗೋವಿನ ಜೋಳವನ್ನು ಖರೀದಿಸುವುದಕ್ಕೆ ಅವಧಿಯನ್ನು ವಿಸ್ತರಿಸಿತು. ಅವಧಿ ವಿಸ್ತರಣೆಯಾದ ನಂತರವೂ ಗೋವಿನ ಜೋಳದ ಖರೀದಿ ತೀವ್ರಗತಿಯಿಂದ ಆಗುತ್ತಿಲ್ಲ. ವಿಸ್ತರಿಸಿರುವ ಅವಧಿ 31 ನೇ ಮಾರ್ಚಿ ತಿಂಗಳವರೆಗೆ ಮುಂದುವರಿಯುವುದರಿಂದ ಖರೀದಿ

ಕೇಂದ್ರಗಳಲ್ಲಿ ಲಕ್ಷಾಂತರ ಟನ್‌ಗಳಷ್ಟು ಗೋವಿನ ಜೋಳ ರಾಶಿಯಾಗಿ ಬಿದ್ದಿರುವುದರಿಂದ, ಮಳೆ ಏನಾದರೂ ಬಂದರೆ ಎಲ್ಲವೂ ಗೊಬ್ಬರವಾಗುತ್ತದೆ! ಇವೊತ್ತು ಶಿವಮೊಗ್ಗದಲ್ಲಿ ದಿನವೊಂದಕ್ಕೆ ಒಂದು ಸಾವಿರ ಕ್ವಿಂಟಾಲ್‌ನಷ್ಟು ಗೋವಿನ ಜೋಳವನ್ನು ಖರೀದಿ ಮಾಡಲಾಗುತ್ತಿದೆ. ಸರ್ಕಾರ ತೀವ್ರಗತಿಯಲ್ಲಿ ಖರೀದಿಸುತ್ತಿಲ್ಲದಿರುವುದನ್ನು ಪ್ರತಿಭಟಿಸಿ ನಮ್ಮ ಪಕ್ಷದ ಮಾನ್ಯ ಹಿರಿಯ ನಾಯಕರಾದ ಶ್ರೀ ಯಡಿಯೂರಪ್ಪನವರು ಕಳೆದ ಎರಡು ದಿವಸಗಳಿಂದ ಧರಣಿ, ಸತ್ಯಾಗ್ರಹ ಮಾಡುತ್ತಿದ್ದಾರೆ. ಹುಬ್ಬಳ್ಳಿ, ನವಲಗುಂದ ನರಗುಂದ, ಹೆಬ್ಬೂರುಗಳಲ್ಲಿರುವ, ಎಪಿಎಂಸಿ ಖರೀದಿ ಕೇಂದ್ರಗಳ ಮುಂದೆ ಸುಮಾರು ಲಕ್ಷಾಂತರ ಟನ್‌ಗಳಷ್ಟು ಗೋವಿನ ಜೋಳ ಇವೊತ್ತು ರಾಶಿಯಾಗಿ ಬಿದ್ದಿದೆ, ಖರೀದಿಯಾಗುತ್ತಿಲ್ಲ. ರಾಣೆಬೆನ್ನೂರು ಹಾಗೂ ಗದಗನಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ರಾಜ್ಯದ ಎಲ್ಲಾ ಕಡೆಗಳಲ್ಲೂ ಇಂತಹ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಉಗ್ರಾಣದಲ್ಲಿ ವ್ಯವಸ್ಥೆ ಇಲ್ಲದೇ ಖರೀದಿ ಮಾಡುವುದಕ್ಕಾಗುತ್ತಿಲ್ಲವೆಂದು, ಗೋವಿನ ಜೋಳವನ್ನು ಖರೀದಿಸುವ ಖರೀದಿ ಕೇಂದ್ರಗಳನ್ನು ನಾಳೆಯಿಂದ, ಅಂದರೆ 7ನೇ ತಾರೀಖಿನಿಂದ ಸ್ಥಗಿತಗೊಳಿಸಲಾಗುವುದೆಂದು ವಿವಿಧ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೊಟ್ಟಿರುವ ಹೇಳಿಕೆಗಳು ಪತ್ರಿಕೆಗಳಲ್ಲಿ ವರದಿಯಾಗಿದೆ. ಗುಡಾಣದ ವ್ಯವಸ್ಥೆ ಇಲ್ಲದಿರುವ ಕಾರಣ ಇನ್ನು ಮುಂದೆ ಗೋವಿನ ಜೋಳವನ್ನು ಖರೀದಿಸುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳಿರುವುದು, ಈಗಾಗಲೇ ಸಂಕಷ್ಟದಂಥ ಬೆಂಕಿಯಲ್ಲಿ ಬೇಯುತ್ತಿರುವ ರೈತರುಗಳಿಗೆ ತುಪ್ಪವನ್ನು ಸುರುವಿ ಅವರ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ರೈತರ ಪರಿಸ್ಥಿತಿ ಹೀಗಿದ್ದರೂ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ? ಪರಿಸ್ಥಿತಿ ಹೀಗಿರುವಾಗ ಉಗ್ರಾಣದ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿತ್ತು. ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದಿಂದ ಏಕೆ ಸಾಧ್ಯವಾಗುತ್ತಿಲ್ಲ? ಬದಲಿಗೆ ಪರೋಕ್ಷವಾಗಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವಂತಾದ್ದು ಆಗುತ್ತಿದೆ. ರಾಜ್ಯ ಸರ್ಕಾರಕ್ಕೆ ಈ ದಿಸೆಯಲ್ಲಿ ಏನೂ ಕ್ರಮ ಕೈಗೊಳ್ಳುವುದಕ್ಕೆ ಆಗುತ್ತಿಲ್ಲ. ಮಾನ್ಯ ಶಾಸಕರು ಸಹ ಧರಣಿ ಕುಳಿತಿದ್ದಾರೆ.

12.30 ಪಿ.ಎಂ.

7 ನೇ ತಾರೀಖಿನಿಂದ ಅಲ್ಲಿ ಬಂದ್ ಮಾಡುವುದಾಗಿ ಹೇಳಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ರೈತರು ಧರಣಿ ಕುಳಿತಿದ್ದಾರೆ. ಶಿವಮೊಗ್ಗದಲ್ಲಿ ಯಡಿಯೂರಪಪ್ನವರು ಕಳೆದ ಮೂರು ದಿವಸಗಳಿಂದ ಧರಣಿ ಮಾಡುತ್ತಿದ್ದಾರೆ. ಗೋವಿನಜೋಳವನ್ನು ಬೆಳೆದಿರುವ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಈಗಾಗಲೇ ಸ್ವಲ್ಪ ಪ್ರಮಾಣದಲ್ಲಿ ಖರೀದಿ ಮಾಡಿದ್ದೀರಿ, ಆದರೆ ಯಾವ ಪ್ರಮಾಣದಲ್ಲಿ ಖರೀದಿ ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಮೂರು ದಿವಸಗಳಿಂದ ಯಡಿಯೂರಪ್ಪನವರು ಧರಣಿ ಸತ್ಯಾಗ್ರಹ ಕುಳಿತಿದ್ದಾರೆ. ಆದರೂ ಸರ್ಕಾರ ಇದರ ಬಗ್ಗೆ ಸ್ಪಂದಿಸುತ್ತಿಲ್ಲ, ರೈತರ ಗೋಳನ್ನು ಕೇಳದಿರುವ ಪರಿಸ್ಥಿತಿ ರಾಜ್ಯದಲ್ಲಿದೆ. ಇಡೀ ರಾಜ್ಯದಲ್ಲಿ ಹತ್ತು ಲಕ್ಷ ಟನ್ ಗೋವಿನ ಜೋಳ ಬೀದಿಯಲ್ಲಿ ಬಿದ್ದಿದೆ. ಇದನ್ನು ಖರೀದಿ ಮಾಡುವ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವಿಚಾರ ನಿಯಮ 69 ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಚಾರವೆಂದು ಚರ್ಚೆಗೆ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್: ಪತ್ರಿಕೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಗಿತ ಮಾಡುತ್ತೇವೆಂದು ಇವತ್ತು

ವರದಿ ಆಗಿರುವುದರಿಂದ ನಾನು ಕೇಳುತ್ತಿದ್ದೇನೆ. ಈ ವಿಚಾರದ ಬಗ್ಗೆ ಚರ್ಚೆ ಮಾಡುವುದು ಬೇರೆ ವಿಚಾರ. ಖರೀದಿ ಕೇಂದ್ರಗಳನ್ನು ಸ್ಥಗಿತ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಯವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ರೈತರಲ್ಲಿ ಗೊಂದಲವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ: ನನದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ. ತಾವು ಹೇಳುವುದಿದ್ದರೆ ಬೇರೆ ರೂಪದಲ್ಲಿ ಪ್ರಸ್ತಾಪಿಸಿ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಪತ್ರಿಕೆಗಳಲ್ಲಿ ಬಂದಿರುವ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತಿದ್ದಾರೆ. ಹಾಗಿದ್ದಮೇಲೆ ಸಚಿವರು ಏಕೆ ಅಡ್ಡಿ ಮಾಡಬೇಕು? ಸಂಸದೀಯ ಸಚಿವರು ಇದೇ ವಿಚಾರ ನಿಯಮ, 69 ರ ಅಡಿಯಲ್ಲಿ ಚರ್ಚೆಯಾಗುತ್ತಿದೆಯೆಂದು ಹೇಳಿದ್ದಾರೆ, ಅದನ್ನು ಇಲ್ಲವೆಂದು ನಾವೂ ಹೇಳುತ್ತಿಲ್ಲ. ಆದರೆ ಅದಕ್ಕೆ ದೀರ್ಘವಾಗಿ ಚರ್ಚೆಯಾಗಿ ಸರ್ಕಾರದಿಂದ ಉತ್ತರ ಬರಬೇಕಾಗುತ್ತದೆ. ಅವರ ಗಂಭೀರವಾದ ಇಂಥ ವಿಚಾರದ ಬಗ್ಗೆ ಈಗಾಗಲೆ ನಿಯಮ 69ರ ಅಡಿಯಲ್ಲಿ ಸ್ವಲ್ಪ ಮಾತನಾಡಿದ್ದಾರೆ. ಅವರು ಮಮಾತನಾಡಿದ ಮೇಲೂ ಈ ರೀತಿ ಆಗುತ್ತದೆಂದರೆ ಹೇಗೆ? ಆದ್ದರಿಂದ ಸರ್ಕಾರ ತಕ್ಷಣ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಅವರು ಇದೇ ವಿಚಾರದಲ್ಲಿ ಸುಮಾರು ಮುಕ್ಕಾಲು ಗಂಟೆಗಳ ಕಾಲ ಮಾತನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಸಂಸದೀಯ ಸಚಿವರು ತಿಳಿಸಿರುವಂತೆ ನಿಯಮ 69 ರ ಅಡಿಯಲ್ಲಿ ಇದೇ ವಿಚಾರ ಚರ್ಚೆಗೆ ಇದೆ. ಕೆಲವರು ಈಗಾಗಲೆ ಇದರ ಬಗ್ಗೆ ಮಾತನಾಡಿದ್ದಾರೆ. ನಾನೂ ಇದರ ಬಗ್ಗೆ ಮಾತನಾಡಬೇಕೆಂದು ತಯಾರಿ ಮಾಡಿಕೊಂಡು ಬಂದಿದ್ದೇನೆ. ಹೇಲಿದ್ದನ್ನೇ ಒಬ್ಬರೇ ಹೇಳುತ್ತಾ ಹೋದರೆ ನಮ್ಮ ಕೆಲಸವೇನು ಉಳಿಯುತ್ತದೆ.?

ಶ್ರೀ ಅರಗಜ್ಞಾನೇಂದ್ರ: ಶೂನ್ಯ ವೇಳೆ ನಿನ್ನೆ, ಇವತ್ತಿನ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕಾಗಿ ಇರುವುದು.

ಶ್ರೀ ಡಿ.ಬಿ. ಚಂದ್ರೇಗೌಡ: ಶೂನ್ಯ ವೇಳೆ ಇರುವುದೇ ನಿನ್ನೆ ಮತ್ತು ಇವತ್ತಿನ ಮುಖ್ಯ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಎಂಬ ಬಗ್ಗೆ ನಾವುಗಳು ಹೊಸದಾಗಿ ಕಲಿಯಬೇಕಾಗಿಲ್ಲ. ಆದರೆ ಶೂನ್ಯ ವೇಳೆಯಲ್ಲಿ ವಿಚಾರವನ್ನು ಸದನದ ಗಮನಕ್ಕೆ ವಿಚಾರವನ್ನು ತರುವುದು ಮಾತ್ರ ಇಲ್ಲಿ ಮುಖ್ಯ. ತಾವು ವಿಚಾರವನ್ನು ಹೇಳಿ, ಮಂತ್ರಿಗಳು ಇದ್ದಾರೆ, ಉತ್ತರವನ್ನು ಕೊಡಲು ತಯಾರಾಗಿದ್ದಾರೆ. ಅದೇ ವಿಚಾರದ ಬಗ್ಗೆ ಬೇರೆಯವರಿಗೂ ಸ್ವಲ್ಪ ಅವಕಾಶ ಕೊಡಬೇಕು. ಅದಕ್ಕಾಗಿ ನಾನು ಹೇಳಿದ್ದು.

ಅಧ್ಯಕ್ಷರು: ಈ ವಿಚಾರವನ್ನು ಬಹಳ ಮುಖ್ಯವಾದ ವಿಚಾರವೆಂದು ಮೊದಲು ನಿಲುವಳಿ ಸೂಚನೆಯ ಅಡಿಯಲ್ಲಿ ತರಲಾಯಿತು. ಅನಂತರ ಸಮಯ ಸಾಕಾಗುವುದಿಲ್ಲವೆಂದು ನಿಯಮ 69 ಕ್ಕೆ ಇದನ್ನು ಪರಿವರ್ತನೆ ಮಾಡಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಅದೇ ವಿಚಾರವಾಗಿ ನಾವು ಚರ್ಚೆ ಮಾಡುತ್ತಿರುವಾಗ ಮತ್ತೆ ಇಲ್ಲಿ ಇದನ್ನು ಹೇಳುವುದು ಸೂಕ್ತವಲ್ಲವೆಂದು ಮಾನ್ಯ ಸಂಸದೀಯ ಸಚಿವರು ಹೇಳುತ್ತಿರುವುದರಲ್ಲೂ ಅರ್ಥವಿದೆ. ಆದ್ದರಿಂದ ತಾವು ಬೇಗ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಜೋಳ ಖರೀದಿ ಕೇಂದ್ರ ಸ್ಥಗಿತವೆಂದು ಪತ್ರಿಕೆಗಳಲ್ಲಿ ಬಂದಿರುವುದರಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಅನ್ನು ನಾನು ಕೇಳುತ್ತಿರುವುದು.

ಶ್ರೀ ಕೆ.ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಚಾರವೆಂದೇ ತಾವು ನಿಯಮ 69 ರ ಅಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದ್ದೀರಿ. ಅಲ್ಲಿ ಹೇಗೂ ಸಮಗ್ರವಾಗಿ ಚರ್ಚೆಯಾಗುತ್ತದೆ. ಹಾಗಿದ್ದಮೇಲೆ ಮತ್ತೆ ಇದರ ಬಗ್ಗೆ ಇಲ್ಲಿ ಹೇಳುವುದರಿಂದ ಪ್ರಯೋಜನವೇನು?

ಶ್ರೀ ಕೆ.ಬಿ. ಕೋಳಿವಾಡ್: (ರಾಣಿಬೆನ್ನೂರು) ಮಾನ್ಯ ಅಧ್ಯಕ್ಷರೇ, ಕಳೆದ 28ರ ನಂತರ ಮೆಕ್ಕೆ ಜೋಳವನ್ನು ಖರೀದಿ ಮಾಡಲು ಇದುವರೆಗೆ ಎಫ್.ಸಿ.ಐ.ನಿಂದ ಟೆಸ್ಟ್ ಮಾಡಲು ಯಾರೂ ಬಂದಿಲ್ಲ. ರೀಜನಲ್ ಮೆನೇಜರ್, ಎಫ್.ಸಿ.ಐ.ಇವರು ಇನ್ನು ಮುಂದೆ ನಾವು ಬರೆದಿದ್ದಾರೆ. ಆದ್ದರಿಂದ ರಾಣಿಬೆನ್ನೂರಿನಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವ ಪರಿಸ್ಥಿತಿ ಉದ್ಭವವಾಗಿದೆ. ತಾವು ಕೂಡಲೇ, ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿಸಬೇಕು. ಎಫ್.ಸಿ.ಐ.ನವರು ಹೇಳುವುದು ಒಂದು, ಮಾಡುವುದು ಒಂದು. ಆದ್ದರಿಂದ ಮೆಕ್ಕೆ ಜೋಳ ಖರೀದಿ ಬಗ್ಗೆ ಕೂಡಲೇ ಏನಾದರೂ ವ್ಯವಸ್ಥೆ ಮಾಡಲೇ ಬೇಕು.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಸುಮಾರು ಒಂದೂವರೆ ಲಕ್ಷ ಮೆಕ್ಕೆ ಜೋಳದ ಚೀಲಗಳು ಆರ್.ಎಂ.ಸಿ. ಯಾರ್ಡ್‌ನಲ್ಲಿ ಬಿದ್ದಿದೆ. ಕಳೆದ ಒಮದು ತಿಂಗಳಿಂದ ಅದನ್ನು ಎತ್ತುವಂಥವರ್ಯಾರೂ ಗತಿಯಿಲ್ಲ. ಮಲೆನಾಡು ಪ್ರದೇಶವಾದ ಅಲ್ಲಿ ಮಳೆ ಬಂದರೆ ಒಂದು ಸ್ವಲ್ಪವೂ ಅದು ಉಳಿಯುವುದಿಲ್ಲ. ರೈತರುಗಳು ರಾತ್ರಿಹಗಲುರಸ್ತೆಯ ಮೇಲೆ ಆಚೀಲವನ್ನು ಇಟ್ಟುಕೊಂಡು ಕಾಯುತ್ತಿದ್ದಾರೆ. ಮೊನ್ನೆ ದಿವಸ ಆಡಳಿತ ಪಕ್ಷದ ಕೆಲವು ಸದಸ್ಯರು ಅವರಿಗೆ ಇದರ ಬಗ್ಗೆ ಬಹಳ ಕಳಕಳಿ ಇದೆಯೆಂದು ಬಾವಿಗೆ ಧರಣಿ ಮಾಡಲು ಬಂದರು. ಅದರ ಸಲುವಾಗಿ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದವರ ಜೊತೆ ಮಾತನಾಡಿ, ಇದಕ್ಕೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟರೂ, ತಾವು ಗೋಡೌನ್ ಇಲ್ಲ ಎಂಬ ನೆಪವನ್ನು ಹೇಳಿ ಖರೀದಿಯನ್ನು ಸ್ಥಗಿತಗೊಳಿಸುತ್ತೇನೆಂದು ಹೇಳಿದರೆ ರೈತರು ಏನು ಮಾಡಬೇಕು? ಶಿವಮೊಗ್ಗದಲ್ಲಿ ಮೊನ್ನೆಯಿಂದ ಕಾನೂನು ಸುವ್ಯವಸ್ಥೆಗೆ ತೊಂದರೆಯುಂಟಾಗಿದೆ. ಮಾನ್ಯ ಯಡಿಯೂರಪ್ಪನವರು, ಸಾವಿರಾರು ರೈತರು ಅಲ್ಲಿ ಧರಣಿ ಮಾಡುತ್ತಿದ್ದಾರೆ. ಮಾರುಕಟ್ಟೆಯೊಳಕ್ಕೆ ಅಡಿಕೆಯಿಂದ ಪ್ರಾರಂಭವಾಗಿ ಮತ್ತಾವುದೇ ಸಾಮಗ್ರಿಗಳು ಬರಲು ಆಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾವುಗಳೇನು ಯದ್ದೋಪಾದಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ತಮ್ಮ ಹೇಳಿಕೆಗಳಿಂದ, ಒಂದು, ರೈತರಿಗೆ ಇದೇ ಪರಿಸ್ಥಿತಿಯನ್ನು ಖಾಯಂ ಮಾಡುವುದು, ಮತ್ತೊಂದು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸವಾಗುತ್ತಿದೆಯೇ ವಿನಃ ತಮ್ಮ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಖರೀದಿ ಕೇಂದ್ರಗಳನ್ನು ನಡೆಸುವ ಪ್ರಾಮಾಣಿಕ ಕೆಲಸಗಳು ನಡೆಯುತ್ತಿಲ್ಲ. ತಕ್ಷಣವೇ ಆ ಕೆಲಸವಾಗಬೇಕು, ರೈತರಿಗೆ ಸರ್ಕಾರದಿಂದ ಒಳ್ಳೆಯ ಸುದ್ದಿ ಹೋಗಬೇಕು, ಒಂದೆರಡು ದಿವಸಗಳಲ್ಲಿ ಅಲ್ಲಿರುವ ಮೆಕ್ಕೆಜೋಳವನ್ನು ಲಿಫ್ಟ್ ಮಾಡಲು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು. ಮಾನ್ಯ ಕರಿಯಣ್ಣನವರು ಶಿವಮೊಗ್ಗದಲ್ಲೇ ಇದ್ದು, ಜಿಲ್ಲಾಧಿಕಾರಿಗಳೊಂದಿಗೆ ಸಹಕಾರ ನೀಡಿ

ಮೆಕ್ಕೆಜೋಳವನ್ನು ಖರೀದಿ ಮಾಡಿಸಬಹುದಾಗಿತ್ತು. ಆದರೆ ಅಲ್ಲೂ ತೊಂದರೆ ಕೊಡುತ್ತಾರೆ, ಇಲ್ಲಿ ನಾವು ಮಾತನಾಡುವುದಕ್ಕೂ, ತೊಂದರೆ ಕೊಡುತ್ತಾರೆ. ಈ ರೀತಿ ಆಗಬಾರದು ನಮ್ಮ ನಾಯಕರು ಮಾತನಾಡಲು ನಿಂತಾಗಲೂ ತೊಂದರೆ ಕೊಡುತ್ತಾರೆ, ನಾವು ತಮ್ಮ ಅನುಮತಿ ಮೇರೆಗೆ, ಮಾತನಾಡುವಾಗಲೂ ತೊಂದರೆ ಕೊಡುತ್ತಾರೆಂದರೆ ಹೇಗೆ?

ಶ್ರೀ ಕೆ.ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರಿಗೂ ಶಿವಮೊಗ್ಗದಲ್ಲಿರುವ ಕಷ್ಟದ ಅರಿವಿದೆ. ನಮ್ಮ ಜಿಲ್ಲಾ ಸಚಿವರು ಜಿಲ್ಲಾಧಿಕಾರಿಗಳನ್ನು ಕರೆಸಿ ಎಲ್ಲಾ ವ್ಯವಸ್ಥೆ ಮಾಡಿ, ಅಲ್ಲಿರುವ ಸಿನಿಮಾ ಮಂದಿರಗಳಿಂದ ಹಿಡಿದು ಎಲ್ಲಾ ಗೋಡೌನ್‌ಗಳನ್ನು ಹುಡುಕಿ, ಮೆಕ್ಕೆ ಜೋಳವನ್ನು ತುಂಬುವ ವ್ಯವಸ್ಥೆಯನ್ನು ಮಾಡಿದ್ದಾರೆ. ಮಾನ್ಯ ಜ್ಞಾನೇಂದ್ರರವರು ಅಲ್ಲಿ, ಇನ್ನೆಲ್ಲಾದರೂ ಗೋಡೌನ್‌ಗಳನ್ನು ತೋರಿಸಿದರೆ, ಸರ್ಕಾರ ಅವುಗಳಲ್ಲೂ ಮೆಕ್ಕೆ ಜೋಳವನ್ನು ತುಂಬಿಸಲು ತಯಾರಿದೆ, ಜಿಲ್ಲಾಧಿಕಾರಿಗಳೂ ತಯಾರಿದ್ದಾರೆ. ಜೋಳವನ್ನು ಎತ್ತದಿರಲು ಹಮಾಲಿಗಳು ಒಂದು ಸಲ ಸ್ಟ್ರಕ್ ಮಾಡಿದ್ದರು. ಅಂಥ ಸಂದರ್ಭದಲ್ಲಿ ರಾಜಿ ಮಾಡಿಸಿ, ಅವರು ಸ್ಟ್ರೈಕ್ ವಾಪಸ್ ತೆಗೆದುಕೊಳ್ಳುವ ವ್ಯವಸ್ಥೆಯನ್ನೂ ಮಾಡಿಸಲಾಯಿತು. ಇನ್ನೊಂದು, ಸಲ ಯಾರ್ಡ್‌ನಲ್ಲಿರುವ ಜೋಳವನ್ನು ತುಂಬಿಕೊಂಡು ಬೇರೆ ಕಡೆ ಹಾಕಲು ಲಾರಿಗಳೂ ಬಾರದಿರುವ ಪರಿಸ್ಥಿತಿ ಇತ್ತು. ಅದಕ್ಕೂ ಆ ಸಂಘದವರನ್ನೆಲ್ಲ ಕರೆಸಿ ರಾಜಿ ಮಾಡಿ ಪರಿಸ್ಥಿತಿಯನ್ನು ಸುಗಮಗೊಳಿಸಲಾಯಿತು. ಇಷ್ಟೆಲ್ಲಾ ಏರ್ಪಾಟು ಮಾಡಿರುವುದು ಮಾನ್ಯ ಶಾಸಕರಿಗೆ ಗೊತ್ತಿದೆ. ಆದರೆ ರಾಜ್ಯ ಸರ್ಕಾರ ಇದಕ್ಕೆ ಸ್ಪಂದಿಸಿಲ್ಲವೆಂದೇನು ಅವರು ಹೇಳಿದ್ದಾರೆ ಅದು ಸತ್ಯವಾದ ವಿಚಾರವಲ್ಲ. ಸಮಸ್ಯೆಗೆ ಜಿಲ್ಲಾಧಿಕಾರಿಗಳು, ಇತರೆ ಅಧಿಕಾರಿಗಳು ಸ್ಪಂದಿಸಿದ್ದಾರೆ. ನಾನೂ ಸಹ ವಾಸ್ತವಿಕವಾಗಿ ಅಲ್ಲೇ ಇದ್ದೆ. ಜೋಳವೂ ಇನ್ನೂ ಯಾರ್ಡ್‌ನಲ್ಲಿದೆ ಎಂದು ಹೇಳುವುದು ಸರಿಯಲ್ಲ. ಜಿಲ್ಲಾ ಸಚಿವರು ಬಂದಿದ್ದಾರೆ. ಅದನ್ನು ಅವರು ನೋಡಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೆಕೆರೂರು): ಮಾನ್ಯ ಅಧ್ಯಕ್ಷರೇ, ನಮ್ಮಲ್ಲೂ ಒಂದು ವಾರದಿಂದ ಟಿಸ್ಪರ್‌ಗಳು ಇಲ್ಲ. ಜೋಳದ ತೂಕವನ್ನು ಮಾಡುತ್ತಿಲ್ಲ, ತೂಕ ಮಾಡಿರುವ ಜೋಳವನ್ನು ಗೋಡೌನ್‌ಗಳಿಗೆ ಸಾಗಿಸುವಂಥ ವ್ಯವಸ್ಥೆ ಇಲ್ಲ. ರೈತರು ಬಹಳ ಕಂಗಾಲಾಗಿದ್ದಾರೆ. ಮಳೆ ಬಂದರೆ ಕೋಟಿಗಟ್ಟಲೆ ಮೌಲ್ಯದ ಮೆಕ್ಕೆ ಜೋಳ ನಾಶವಾಗುತ್ತದೆ. ನಮ್ಮದು ಗ್ರಾಮೀಣ ಪ್ರದೇಶವಾಗಿರುವುದರಿಂದ ರಾಜ್ಯದ ಉಗ್ರಾಣವಾಗಲಿ, ಕೇಂದ್ರದ ಉಗ್ರಾಣವಾಗಲಿ, ಖಾಸಗಿ ಉಗ್ರಾಣವಾಗಲಿ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಬೇರೆ ಎಲ್ಲಾದರೂ ಉಗ್ರಾಣದ ವ್ಯವಸ್ಥೆಯನ್ನು ಮಾಡಿ, ಮೆಕ್ಕೆಜೋಳವನ್ನು ಸಾಗಿಸುವ ವ್ಯವಸ್ಥೆಯನ್ನು ಮಾಡಬೇಕು. ಕಾನೂನು ಸವ್ಯವಸ್ಥೆ ಹದಗೆಡುವಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜ್ (ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೇ, ಪಿರಿಯಾಪಟ್ಟಣದಲ್ಲಿ ಮುಸುಕಿನ ಜೋಳ ಖರೀದಿ ಮಾಡತಕ್ಕಂಥ ಕೇಂದ್ರ ಈಗಾಗಲೇ ಕಳೆದ ಒಂದು ವಾರದಿಂದ ಸ್ಥಗಿತಕೊಂಡಿದೆ. ಕೇಂದ್ರ ಸರ್ಕಾರದವರು ಆರ್ಡರ್ ಕೊಟ್ಟಿದ್ದರೂ ಕೂಡ ರಾಜ್ಯ ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಇದುವರೆಗೆ ಕೇವಲ 20 ಸಾವಿರ ಮೂಟೆ ಮಾತ್ರ ಕೊಂಡುಕೊಳ್ಳಲಾಗಿದೆ. ಸುಮಾರು 2 ಲಕ್ಷ ಟನ್‌ನಷ್ಟು ಬೆಳೆಯನ್ನು ನಮ್ಮ ಇಡೀ ಸರೌಂಡಿಗ್ಸನಲ್ಲಿ ಬೆಳೆಯುತ್ತಿದ್ದಾರೆ. ಇನ್ನೂ ಸುಮಾರು 20

ಸಾವಿರ ಮೂಟೆ ಹೊರಗಡೆಯೇ ಬಿದ್ದಿದೆ. ಇವತ್ತು ರಾಜ್ಯ ಸರ್ಕಾರ ಇದರ ಬಗ್ಗೆ ಏನಾದರೂ ಕ್ರಮವನ್ನು ಕತ್ಷಣವೇ ತೆಗೆದುಕೊಳ್ಳದಿದ್ದರೆ ಬಹಳ ತೊಂದರೆ ಯಾಗುತ್ತದೆ. ರಾಜ್ಯ ಸರ್ಕಾರ ತಕ್ಷಣವೇ ಇದರ ಬಗ್ಗೆ ಕಾರ್ಯಪ್ರವೃತ್ತರಾಗಿ, ಅಲ್ಲಿರುವ ಸಮಸ್ಯೆಗಳೇನಿವೆ, ಅದಕ್ಕೆ ಸ್ಪಂದಿಸಿ ಅದನ್ನು ಖರೀದಿ ಮಾಡಲು ವ್ಯವಸ್ಥೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೋರುತ್ತಿದ್ದೇನೆ.

+ ಶ್ರೀ ಡಿ. ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋದ ಪಕ್ಷದ ನಾಯಕರು ಹೇಳಿದಂತೆ, ಧಾರವಾಡ ಜಿಲ್ಲೆಯಲ್ಲಿ ಒಂದು ಕೇಂದ್ರ ಬಂದ್ ಆಗಿದೆ. ಸತ್ತೂರಿನಲ್ಲಿಯ ಗೋಡೌನ್ ತುಂಬಿರುವುದರಿಂದ ಅಲ್ಲಿ ಕೇಂದ್ರ ಬಂದ್ ಆಗಿದೆ. ಅದರ ಬದಲು ನವಲಗುಂದ, ಹೆಬಸೂರು ಮತ್ತು ಅಳಗವಾಡಿ ಕೇಂದ್ರಗಳಲ್ಲಿ ಈಗಲೂ ಕೂಡ ಖರೀದಿ ನಡೆಯುತ್ತಿದೆ ಎಂಬ ವಿಚಾರವನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ನಾನು ಜಿಲ್ಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಇನ್ನು ಶಿವಮೊಗ್ಗೆ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಇದುವರೆಗೆ 20 ಲಕ್ಷ ಕ್ವಿಂಟಾಲ್‌ನಲ್ಲಿ 4 ಲಕ್ಷ ಕ್ವಿಂಟಾಲ್‌ಗಳಷ್ಟು ಮೆಕ್ಕೆ ಜೋಳವನ್ನು ಈಗಾಗಲೇ ಪ್ರಕ್ಯೂರ್ ಮಾಡಲಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನಿಜ. ಸ್ವಲ್ಪ ಪ್ರಮಾಣದಲ್ಲಿ ಅಲ್ಲಿ ಮಾಲು ಹೊರಗಡೆ ಇದೆ. ಅಲ್ಲಿ ಗೋಡೌನ್‌ಗಳ ಕೊರತೆ ಇದೆ. ಶಿವಮೊಗ್ಗ, ದಾವಣಗೆರೆ, ಹಾವೇರಿ, ಗದಗ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಗೋಡೌನ್‌ಗಳ ತೊಂದರೆ ಇದೆ. ಅಲ್ಲಿ ಗೋಡೌನ್‌ಗಳ ವ್ಯವಸ್ಥೆಯನ್ನು ಎಲ್ಲಿ ಮಾಡಬೇಕು ಎಂಬ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿದೆ. ಸದನದ ಗಮನಕ್ಕೆ ನಾನು ಇನ್ನೊಂದು ವಿಚಾರವನ್ನು ತರಬಯಸುವುದೇನೆಂದರೆ, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದಾರೆ. ಅದರ ಪ್ಯಾರಾಗ್ರಾಫ್‌ವೊಂದನ್ನು ನಾನಿಲ್ಲಿ ಓದಿ ಹೇಳಬಯಸುತ್ತೇನೆ.

" As the Reserve Bank of India restrains the Food Corporation of India to extend C.C. limite beyond what it has already permitted and allowed for undertaking coarse grains purchases in the states, we are restricting the purchase of coarse grains."

ಈ ರೀತಿ ಪತ್ರವನ್ನು ಅವರು 2 ನೇ ತಾರೀಖಿನಂದು ರಾಜ್ಯ ಸರ್ಕಾರಕ್ಕೆ ಬರೆದಿದ್ದಾರೆ. ಅವರ ಸಿ.ಸಿ. ಲಿಮಿಟ್ ಮುಗಿದಿದೆ ಎಂಬ ವಿಚಾರ ನಮಗೆ ತಿಳಿದ ನಂತರ ನಾವು ಕೇಂದ್ರ ಸರ್ಕಾರದವರಿಗೆ ಇಲ್ಲಿರತಕ್ಕಂಥ ಕ್ಯಾಷ್ ಕ್ರೆಡಿಟ್ ಲಿಮಿಟ್ ಜಾಸ್ತಿ ಮಾಡಿ, ರೈತರಿಗೆ ಕೊಡತಕ್ಕಂಥ ಹಣವನ್ನೂ ಸಹಿತ ತಡೆಯಿಡಿಯಬೇಡಿ ಎನ್ನುವಂತಹ ಮಾತನ್ನು ಹೇಳಿದ್ದೇವೆ. ಈಗಿರುವ ಗೋಡೌನ್‌ಗಳ ಕೊರತೆಯನ್ನು ತಕ್ಷಣದಲ್ಲಿ ನೀಗಿಸಿಕೊಳ್ಳುವುದು ಸಾಧ್ಯವಿಲ್ಲ. ಕೆಲವು ಕಡೆ ಕಲ್ಯಾಣ ಮಂಟಪ, ಕೆಲವು ಕಡೆ ಚಿತ್ರಮಂದಿರ ಹೀಗೆ ಎಲ್ಲೆಲ್ಲಿ ಎಷ್ಟೆಷ್ಟು ಗೋಡೌನ್‌ಗಳು ಸಿಗುತ್ತವೆಯೋ, ಆ ಇಡತಕ್ಕಂಥ ಕೆಲಸವನ್ನು ಇವತ್ತು ಸರ್ಕಾರ ಮಾಡುತ್ತಿದೆ. ಇನ್ನೂ ಎಲ್ಲೆಲ್ಲಿ ಗೋಡೌನ್‌ಗಳು ಸಿಗುತ್ತವೆ ಎಂಬ ಬಗ್ಗೆ ನಾವು ನೋಡುತ್ತಿದ್ದೇವೆ. ಗೋಡೌನ್‌ಗಳನ್ನು ಹುಡುಕಿಸಿ ತಕ್ಷಣ ಕೊಡುತ್ತಿದ್ದೇವೆ. ಗೋಡೌನ್‌ಗಳನ್ನು ತತ್‌ಕ್ಷಣದಲ್ಲೇ ಕಟ್ಟಿಸಿಕೊಡಲಿಕ್ಕೆ ಯಾವ ಸರ್ಕಾರಕ್ಕೂ ಕೂಡ ಸಾಧ್ಯವಾಗುವುದಿಲ್ಲ. ಟಾರ್ಪಲಿನ್ ಹಾಕಿ ಮೆಕ್ಕೆ ಜೋಳವನ್ನು ಸಂರಕ್ಷಿಸಲಿಕ್ಕೆ ಆಗುವುದಿಲ್ಲ ಎನ್ನುವಂತಹ ಮಾತನನು ಫುಡ್ ಕಾರ್ಪೊರೇಷನ್ ಆಫ್

ಇಂಡಿಯಾದವರು ಸ್ಪಷ್ಟವಾಗಿ ಹೇಳಿದ್ದಾರೆ. ಟಾರ್ಪಲಿನ್ ಕೆಳಗೆ ಕೇವಲ ಗೋಧಿ ಮಾತ್ರ ಸಂರಕ್ಷಿಸಲು ಸಾಧ್ಯ, ಮತ್ತೆ ಇನ್ಯಾವುದೇ ವಸ್ತು ಇಡಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ಎಫ್‌ಸಿಐ ದವರೇ ಹೇಳಿದ್ದಾರೆ. ಆದ್ದರಿಂದ ಟಾರ್ಪಲಿನ್ ಹಾಕಿ ಮೆಕ್ಕೆ ಜೋಳ ಸಂರಕ್ಷಿಸುವುದಕ್ಕೆ ತೊಂದರೆ ಇದೆ ಎಂಬ ಮಾತನ್ನು ಮಾನ್ಯ ಸದಸ್ಯರುಗಳಿಗೆ ನಾನು ತಿಳಿಸಬಯಸುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಗುಡಾಣ ಇಲ್ಲವೆಂದು ಖರೀದಿ ಮಾಡದೇ ಕೇಂದ್ರಗಳನ್ನು ಬಂದ್‌ಮಾಡಿ ಸರ್ಕಾರ ಸುಮ್ಮನೆ ಕುಳಿತಿದೆ. ಹಾಗಾದರೆ ರೈತ ಸಾಯಬೇಕೇ? ಈಗಾಗಲೇ ಸಾಗರ ತಾಲ್ಲೂಕಿನಲ್ಲಿ ನಿನ್ನೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾನೆ. ಇದೇ ಮುಂದುವರೆಯಬೇಕೇ? ಸರ್ಕಾರ ಇನ್ನೂ ಏನು ವಿಚಾರ ಮಾಡುತ್ತಿದೆ. ಹಾಗಾದರೆ ಸರ್ಕಾರ ಇನ್ನು ಮುಂದೆ ಖರೀದಿ ಮಾಡುವುದಿಲ್ಲವೇ? ಅದನ್ನಾದರೂ ಸರ್ಕಾರ ಈ ಸದನದಲ್ಲಿ ಘೋಷಣೆ ಮಾಡಿಬಿಡಲಿ. ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾ ಹೋಗುತ್ತಾನೆ ಬಿಡಿ. ಇದುವರೆಗೂ ಸರ್ಕಾರ ಖರೀದಿ ಮಾಡುತ್ತಿರುವ ಕ್ವಾಂಟಿಟಿ ನೋಡಿದರೆ ಬಹುಶಃ 31 ನೇ ತಾರೀಖಿನೊಳಗಾಗಿ ಎಲ್ಲವನ್ನೂ ಖರೀದಿ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗಲಾರದು. ಪ್ರತಿನಿತ್ಯ ಕೇವಲ 500- 1000 ಕ್ವಿಂಟಾಲ್‌ಗಳಷ್ಟು ಮಾತ್ರ ಸರ್ಕಾರ ಖರೀದಿ ಮಾಡುತ್ತಿದೆ. ಸಾವಿರಾರು ಕ್ವಿಂಟಾಲ್‌ಗಳಷ್ಟು ಮಾಲು ಇನ್ನೂ ಖರೀದಿ ಕೇಂದ್ರಗಳ ಹೊರಗಡೆ ಬಿದ್ದಿದೆ. ರಾಜ್ಯ ಸರ್ಕಾರ ಇವತ್ತು ರೈತರ ಬಗ್ಗೆ ನಿರ್ಲಕ್ಷ್ಯತನ ತೋರುತ್ತಿದೆ. ಇದರ ಬಗ್ಗೆ ಮುಂದೆ ಏನು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.? 31 ನೇ ಮಾರ್ಚ್‌ನೊಳಗಾಗಿ ಖರೀದಿ ಮಾಡಿ ಮುಗಿಸಲು ಆಗುತ್ತದೆಯೇ ಇದಕ್ಕೆ ಅಲ್ಟರ್‌ನೇಟಿವ್ ರೆಮಿಡಿ ಏನು?

ಶ್ರೀ ಡಿ.ಬಿ.ಇನಾಂದಾರ್: ನವಲಗುಂದ, ಹೆಬಸೂರು ಮತ್ತು ಅಳಗವಾಡಿ ಈ ಮೂರು ಕಡೆಗಳಲ್ಲಿ ಖರೀದಿ ನಡೆಯುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್: ದಿನಕ್ಕೆ ಕೇವಲ 500 ಕ್ವಿಂಟಾಲ್ ಮಾತ್ರ ಖರೀದಿಸಿದರೆ ರೈತ ಎಲ್ಲಿಗೆ ಹೋಗಬೇಕು? ಮೊನ್ನೆ, ವೇ ಬ್ರಿಜ್‌ನಲ್ಲಿ 10 ಸಾವಿರ ಕ್ವಿಂಟಾಲ್ ಪರ್ಚೇಸ್ ಮಾಡಿದ್ದೀರಿ. ಆ ರೀತಿ ಏನಾದರೂ ಮಾಡಿದರೆ ಮತ್ರ 31 ನೇ ಮಾರ್ಚ್‌ನೊಳಗಾಗಿ ಖರೀದಿ ಮುಗಿಯುತ್ತದೆ. ಅದನ್ನು ಬಿಟ್ಟು ಸರ್ಕಾರ ಇನ್ನೂ ಕೇವಲ 500- 1000 ಕ್ವಿಂಟಾಲ್‌ಗಳಷ್ಟು ಮಾಲನ್ನು ಮಾತ್ರ ಒಂದೊಂದು ಖರೀದಿ ಕೇಂದ್ರಗಳಲ್ಲಿ ಖರೀದಿಸುತ್ತಿದ್ದರೆ, 31 ನೇ ಮಾರ್ಚ್‌ನೊಳಗೆ ಎಲ್ಲವನ್ನೂ ಖರೀದಿಸಲು ಸಾಧ್ಯವೇ ಇಲ್ಲ. 31 ನೇ ಮಾರ್ಚ್, ಮೀರಿದ ನಂತರ ಮತ್ತೊಮ್ಮೆ ಖರೀದಿಸಲು ಕೇಂದ್ರ ಸರ್ಕಾರ ಟೈಮ್ ಎಕ್ಸ್‌ಟೆನ್‌ಷನ್ ಕೊಡಬೇಕಾಗುತ್ತದೆ. ಮೂರು ತಿಂಗಳು ಸರ್ಕಾರ ಸುಮ್ಮನೆ ಕುಳಿತರೆ ಹೇಗೆ? ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಿಸಬೇಕು. ಇವತ್ತು ರೈತರುಬಹಳ ಗಂಭೀರವಾದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಹದಗೆಡುವಂತಹ ಪರಿಸ್ಥಿತಿ ಉಂಟಾಗುತ್ತಿದೆ. ರೈತರಿಗೆ ಲಕ್ಷಾಂತರ ಟನ್

ಬೆಳೆ ಹಾನಿಯಾಗಿ ಕೋಟ್ಯಾಂತರ ರೂ.ಗಳು ಹಾನಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾದಂತಹ ಕ್ರಮಗಲನ್ನು ತೆಗೆದುಕೊಳ್ಳಬೇಕು. ಈ ರೀತಿ ನಿರ್ಲಕ್ಷ್ಯ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಇನಾಂದಾರ್‌ರವರೇ, ಆದಷ್ಟು ಬೇಗನೇ ಹೆಚ್ಚಿಚ್ಚು ಕೊಂಡು ಕೊಳ್ಳಲಿಕ್ಕೆ ಏರ್ಪಾಡು ಮಾಡಿ.

ಶ್ರೀ ಡಿ.ಬಿ.ಇನಾಂದಾರ್: ಮಾನ್ಯ ಅಧ್ಯಕ್ಷರೇ, ಇವತ್ತು ಪೇಪರ್‌ನಲ್ಲಿ ಬಂದಿದ್ದರ ಬಗ್ಗೆ ನಾನೂ ಕೂಡ ಧಾರವಾಡ ಜಿಲ್ಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಸತ್ತೂರಿನಲ್ಲಿಯ ಗೋಡೌನ್ ತುಂಬಿರುವುದರಿಂದ ಅಲ್ಲಿ ಖರೀದಿ ಮಾಡುವುದನ್ನು ನಿಲ್ಲಿಸಿದ್ದಾರೆ. ಈಗ ನವಲಗುಂದದಿಂದ ಅಲ್ಲಿ, ಇಲ್ಲಿ, ಟ್ರಾನ್ಸ್‌ಪೋರ್ಟ್ ಮಾಡಿ ತೆಗೆದುಕೊಳ್ಳತಕ್ಕದ್ದು ನಡೆದಿದೆ. ಅಲ್ಲಿಂದ ಬೇರೊಂದು ಗೋಡೌನ್ ಅನ್ನು ಓಪನ್ ಮಾಡಿ ಅಲ್ಲಿ ಖರೀದಿ ಮಾಡತಕ್ಕಂಥ ವ್ಯವಸ್ಥೆಯನ್ನು ಈಗಾಗಲೇಮಾಡಿದ್ದಾರೆ. ನವಲಗುಂದ, ಹೆಬಸೂರು ಮತ್ತು ಅಳಗವಾಡಿಗಳಲ್ಲಿ ಪರ್ಚೇಸ್ ನಡೆಯುತ್ತಿದೆ ಎಂಬುದನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕುಂಟು ನೆಪಗಳನ್ನು ಹೇಳುತ್ತಿದ್ದಾರೆ. ಸರ್ಕಾರ ಗಂಭೀರವಾದಂತಹ ಪ್ರಯತ್ನವನ್ನು ಮಾಡುತ್ತಿಲ್ಲ. ಖರೀದಿ ಕೇಂದ್ರ ಬಂದ್ ಆಗಿರುವ ಕಡೆ ಇರುವುದನ್ನು ಬೇರೆ ಕಡೆಗೆ ಕಳುಹಿಸುವಂತಹ ವ್ಯವಸ್ಥೆ ಮಾಡಬೇಕು. ಅದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿದೆ?

ಶ್ರೀ ಡಿ.ಬಿ. ಇನಾಂದಾರ್: ಸರ್ಕಾರಕ್ಕೆ ಆಸಕ್ತಿ ಇಲ್ಲದಿದ್ದಲ್ಲಿ ಸರ್ಕಾರ 24 ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಮಾಡುತ್ತಲೇ ಇರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮೂರು ತಿಂಗಳಿಂದಲೂ ಇದೇ ರೀತಿ ನಡೆಯುತ್ತಿದೆ. ಈಗಾಗಲೇ ಖರೀದಿ ಮಾಡಿ ಮುಗಿಸಬೇಕಾಗಿತ್ತು. ನಾಳೆ ಕಾನೂನು ವ್ಯವಸ್ಥೆಗೆ ತೊಂದರೆ ಉಂಟಾದರೆ ಅದಕ್ಕೆ ಸರ್ಕಾರವೇ ಹೊಣೆಯಾಗುತ್ತದೆ.

ಅಧ್ಯಕ್ಷರು: ಸರ್ಕಾರ ಆದಷ್ಟು ಬೇಗನೇ ಹೆಚ್ಚಿಚ್ಚು ಕೊಂಡುಕೊಳ್ಳಲಿಕ್ಕೆ ವ್ಯವಸ್ಥೆ ಮಾಡಲಿ.

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಅಧ್ಯಕ್ಷರೇ, ಹೆಚ್ಚು ಹೆಚ್ಚು ಕೊಳ್ಳಲಿಕ್ಕಾಗಿಯೇ ಸರ್ಕಾರ ಸದಾ ಪ್ರಯತ್ನ ಮಾಡುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾರ್ಚ್ ಅಂತ್ಯದೊಳಗಾಗಿ ಎಲ್ಲಾ ಮೆಕ್ಕೆ ಜೋಳವನ್ನು ತಾನು ಖರೀದಿ ಮಾಡುವುದಾಗಿ ಸರ್ಕಾರ ಈ ಸದನಕ್ಕೆ ಭರವಸೆ ಕೊಡಲಿ. ಈ ರಾಜ್ಯದಲ್ಲಿ ರೈತರು ಎಷ್ಟೆಷ್ಟು ಮೆಕ್ಕೆ ಜೋಳವನ್ನು ಬೆಳೆದಿದ್ದಾರೋ ಅದೆಲ್ಲವನ್ನೂ ಮಾರ್ಚ್ ತಿಂಗಳೊಳಗಾಗಿ ಸರ್ಕಾರ ತಾನು ಖರೀದಿ ಮಾಡಿಯೇ ತೀರುತ್ತೇನೆ ಎಂದು ಹೇಳಲಿ. ಗೋಡೌನ್ ಸಮಸ್ಯೆ, ಟ್ರಕ್ ಸಮಸ್ಯೆ, ಹಮಾಲರ ಸಮಸ್ಯೆ ಎಂದು ಸರ್ಕಾರ ನೆಪ ಹೇಳುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್ : ಇದೇ ರೀತಿ ಮುಂದುವರೆದರೆ ಮಾರ್ಚ್ ಅಂತ್ಯದೊಳಗಾಗಿ ಎಲ್ಲಾ ಮೆಕ್ಕೆ ಜೋಳವನ್ನೂ ಖರೀದಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆಯೇ? ಬೆಳಗಾಂ ಜಿಲ್ಲೆಯಲ್ಲಿ ಬಿಸ್ಕಿಟ್ ಫ್ಯಾಕ್ಟರಿಯವರೊಬ್ಬರು ಮೆಕ್ಕೆ ಜೋಳವನ್ನು ಖರೀದಿ ಮಾಡಲು ಮುಂದೆ ಬಂದಿದ್ದಾರೆ ಎಂಬ ಸುದ್ದಿಯನ್ನು ನಾನು ಕೇಳಿದ್ದೇನೆ. ಸರ್ಕಾರ ಅವರ ಜೊತೆಗೆ ಮಾತುಕತೆ ಮಾಡಲಿ. ಗುಜರಾತ್‌ನವರೂ ಕೂಡ ಮೆಕ್ಕೆ ಜೋಳ ಖರೀದಿ ಮಾಡಲು ಕೇಳಿದ್ದಾರಂತೆ. ಅಂತಹವರೊಡನೆ ತೀವ್ರವಾಗಿ ಸರ್ಕಾರ ಮಾತುಕತೆ ಮಾಡಿ ಬೇರೆ ಬೇರೆ ಕಡೆಗೆ ಈಗ ದಾಸ್ತಾನು ಮಾಡಿರುವ ಮೆಕ್ಕೆ ಜೋಳವನ್ನು ರವಾನೆ ಮಾಡುವಂತಹ ಕೆಲಸ ಮಾಡಲಿ.

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಅಧ್ಯಕ್ಷರೇ, ಗುಜರಾತ್ ರಾಜ್ಯದಿಂದ ಕೆಲವು ಕಾರ್ಖಾನೆಗಳವರು ಮೆಕ್ಕೆ ಜೋಳವನ್ನು ಖರೀದಿ ಮಾಡಲು ಮುಂದೆ ಬಂದಿದ್ದಾರೆ. ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ತಮಗೆ ಸುಮಾರು 50 ಸಾವಿರ ಟನ್ ಮೆಕ್ಕೆ ಜೋಳ ಬೇಕು ಎನ್ನುವಂತಹ ಬೇಡಿಕೆಯನ್ನು ಅವರು ಇಟ್ಟಿದ್ದಾರೆ. ಆದರೆ ಈಗ ಎಫ್‌ಸಿಐ ಇದರ ಮಾಲೀಕರಾಗಿದ್ದಾರೆ. ಕೇಂದ್ರ ಸರ್ಕಾರದವರು ಈ ಮೆಕ್ಕೆ ಜೋಳವನ್ನು ವಿಲೇವಾರಿ ಮಾಡುವುದರ ಬಗ್ಗೆ ಎಫ್‌ಸಿಐಗೆ ನಿರ್ದೇಶನ ನೀಡಬೇಕಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೇನೂ ಇಲ್ಲ. ಇದನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಖರೀದಿ ಕೇಂದ್ರ ಪ್ರಾರಂಭ ಮಾಡುತ್ತೇವೆ ಎಂದು ಹೇಳಲಿಕ್ಕೂ ಕೂಡ ಮಾನ್ಯ ಸಚಿವರು ತಯಾರಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರಿಗೆ ನೀವು ಇದೇ ರೀತಿಯ ಉತ್ತರವನ್ನು ಕೊಡಬೇಕು ಎಂದು ಕಂಪೆಲಿ ಮಾಡಲು ನನಗೆ ಸಾಧ್ಯವಿಲ್ಲ. ನಾನು ಆ ರೀತಿ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರದವರು ರೈತರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ರೈತರು ಆತ್ಮಹತ್ಯೆಯ ಮೊರೆ ಹೊಕ್ಕಿದ್ದಾರೆ. ಇವತ್ತು ಗಂಭೀರವಾದಂತಹ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಏನೂ ಅರೇಂಜ್‌ಮೆಂಟ್ ಮಾಡಲು ಸರ್ಕಾರ ತಯಾರಿಲ್ಲ. ರೈತರು ಇವತ್ತು ಬಹಳ ತೊಂದರೆಯಲ್ಲಿದ್ದಾರೆ. ಸರ್ಕಾರ ಸಂಪೂರ್ಣವಾಗಿ ಅವರನ್ನು ನಿರ್ಲಕ್ಷ್ಯ ಮಾಡಿದೆ. ಖರೀದಿ ಕೇಂದ್ರಗಳನ್ನು ತೆರೆಯಲಿಕ್ಕೆ ಇವತ್ತು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ....

ಅಧ್ಯಕ್ಷರು: ತಾವು ಹೇಳಬೇಕಾದುದೆಲ್ಲವನ್ನೂ ಹೇಳಿದ್ದೀರಿ. ಸರ್ಕಾರ ಏನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಾರೆ, ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರದ ಈ ರೈತ ವಿರೋಧಿ ನಿಲುವನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಶಾಸಕರು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು: ಬೆಂಗಳೂರು ನಗರದಲ್ಲಿ ಕರಳು ಬೇನೆ ಹರಡುತ್ತಿರುವ ಬಗ್ಗೆ ಈಗ ಮಾನ್ಯ ಸುರೇಶ್‌ಕುಮಾರ್‌ರವರು ಪ್ರಸ್ತಾಪಿಸಿ. ತಾವು ಕೂಡಲೇ ಪ್ರಸ್ತಾಪಿಸಿದ್ದರೆ ಅದು ಲ್ಯಾಪ್ಸ್ ಆಗುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ..

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ನಾನು ಆಗಲೇ ತಮ್ಮ ಮತ್ತು ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೆ. ಆದರೆ ನಾನು ಗಮನ ಸೆಳೆದ ವಿಚಾರದ ಬಗ್ಗೆ ಮಾನ್ಯ ಇನಾಂದಾರ್‌ರವರು ಉತ್ತರ ಕೊಡಲೇ ಇಲ್ಲ. ಒಂದು ವಾರದಿಂದ ನಮ್ಮಲ್ಲಿ ಖರೀದಿ ಸ್ಥಗಿತವಾಗಿದೆ ಎಂದು ನಾನು ಪ್ರಸ್ತಾಪಿಸಿದರೂ ಸಹಾ ಅದಕ್ಕೆ ಉತ್ತರ ಕೊಡದೇ ಮಾನ್ಯ ಸಚಿವರು ಹಾಗೆಯೇ ಹೋಗುತ್ತಿದ್ದಾರೆ. ಹಾಗಾದರೆ ನಾನು ಈ ವಿಷಯದ ಬಗ್ಗೆ ಗಮನ ಸೆಳೆಯದಿದ್ದರ ಪ್ರಯೋಜನವಾದರೂ ಏನು? ರೈತರು ಇವತ್ತು ನಮ್ಮನ್ನು ಸುಮ್ಮನೆ ಬಿಡುವ ಪರಿಸ್ಥಿತಿಯಲ್ಲಿ ಇಲ್ಲ.

ಅಧ್ಯಕ್ಷರು: ಮಂತ್ರಿಗಳಿಗೆ ಇದೇ ರೀತಿ ಉತ್ತರ ನೀಡಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ.I have no jurisdiction to compel the Minister. Ihave no jurisdiction to compel a Minister to answer like this or that. I cannot compel.

ಶ್ರೀ ಬಿ.ಹೆಚ್. ಬನ್ನಿಕೋಡ್: ಸದನದಲ್ಲಿ ಮಾನ್ಯ ಸಚಿವರಿದ್ದಾರೆ, ಒಂದು ವಾರದಿಂದ ಮಾರುಕಟ್ಟೆ ಸ್ಥಗಿತವಾಗಿದೆ ಎಂದು ಹೇಳಿದ್ದೇನೆ. ರೈತರು ನಮ್ಮನ್ನು ಅಲ್ಲಿಂದ ಬಿಡುವ ಪರಿಸ್ಥಿತಿಯಲ್ಲಿ ಇಲ್ಲ. ಆದುದರಿಂದ ಮಂತ್ರಿಗಳು ಏನು ವ್ಯವಸ್ಥೆ ಮಾಡುತ್ತಾರೆ ಎಂದು ಹೇಳಬೇಕು, ಇಲ್ಲದಿದ್ದರೆ, ರೈತರ ಬಗ್ಗೆ ನನ್ನದೇ ಆದ ಮಾರ್ಗವನ್ನು ಅನುಸರಿಸಬೇಕಾಗುತ್ತದೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನು 100 ಸಾರಿ ಈ ಬಗ್ಗೆ ಹೇಳಿದ್ದೇನೆ ಆದರೆ ಸಚಿವರು ಉತ್ತರ ಕೊಡುವುದಕ್ಕೆ ತಯಾರಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಸದನದಲ್ಲಿ ಮಂತ್ರಿಗಳು ನಿಖರವಾಗಿ ಹೀಗೆಯೇ ಉತ್ತರ ಕೊಡಬೇಕೆಂದರೆ ಹೇಗೆ?

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಸದಸ್ಯರು ಕೇಳಿದ ವಿಚಾರದಲ್ಲಿ ಸರ್ಕಾರ ಎಷ್ಟು ನಿರ್ಲಕ್ಷ್ಯವಾಗಿ ಉತ್ತರ ಕೊಡುತ್ತಿದೆ. ಇದು ತಮಾಷೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ದಯಮಾಡಿ ತಮ್ಮ ಮೂಲಕ ನಾನು ಈ ಸದನದ ಸದಸ್ಯರಿಗೆ ಹೇಳುತ್ತೇನೆ. ಅವರು ಶೂನ್ಯ ವೇಳೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅವರ ತೊಂದರೆಗಳನ್ನು ಹೇಳಿದ್ದಾರೆ, ಮೆಕ್ಕೆಜೋಳ ಕೊಂಡುಕೊಳ್ಳುವುದಕ್ಕೆ ಸರ್ಕಾರಕ್ಕೆ ಯಾವ ಬಾಧಕವೂ ಇಲ್ಲ, ತೊಂದರೆಯೂ ಇಲ್ಲ, ಯಾವ ತಾಪತ್ರಯವೂ ಇಲ್ಲ. ಆದರೆ ಪ್ರಶ್ನೆ ಏನೆಂದರೆ, ಮೆಕ್ಕೆ ಜೋಳ ಖರೀದಿ ಮಾಡಿ ಎಲ್ಲಿ ಶೇಖರಿಸಿಡಬೇಕು, ಶೇಖರಿಸಿಡುವುದಕ್ಕೆ ಜಾಗವಿಲ್ಲ, ಅದನ್ನು ತೆಗೆದುಕೊಂಡು ನಾವು ಏನು ಮಾಡಬಹುದು? ಎಲ್ಲ ಗೋಡೌನ್‌ಗಳು ಭರ್ತಿ ಆಗಿವೆ.

ಶ್ರೀ ಸಿ. ಚನ್ನಿಗಪ್ಪ: ಗೋಡೌನ್ ಕಟ್ಟಿಸಿ ರೈತರನ್ನು ಉಳಿಸಿ.

(ಗೊಂದಲ)

ವಿಷಯ: (ಅ) ಬೆಂಗಳೂರು ನಗರದಲ್ಲಿ ಕರುಳುಬೇನೆ ರೋಗದಿಂದ ಸಾಕಷ್ಟು ಜನ ನರಳುತ್ತಿರುವುದು.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಫೆಬ್ರವರಿ 23 ನೇ ತಾರೀಖಿನಿಂದ ಕರುಳು ಬೇನೆ ರೋಗದಿಂದ ಸಾಕಷ್ಟು ಜನ ನರಳುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಫೆಬ್ರವರಿ ಮತ್ತು ಮಾರ್ಚ್ ಬಂದರೆ ಬೆಂಗಳೂರಿನಲ್ಲಿ ಕರುಳು ಬೇನೆ ರೋಗ ಬರುತ್ತದೆ ಎಂದು ಎಲ್ಲರಿಗೂ ಗೊತ್ತು. ಯಾವ ರೀತಿ, ಮಾರ್ಚ್ ಬಂದ ತಕ್ಷಣ ರಾಜ್ಯ ಸರ್ಕಾರ ಬಜೆಟ್ ಮಂಡಿಸುತ್ತದೆ, ಅದೇ ರೀತಿ ಬೆಂಗಳೂರು ನಗರದಲ್ಲಿ ಕರುಳು ಬೇನೆ ಬರುತ್ತದೆ. ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಂಗನ ಕಾಯಿಲೆ, ಹೈದರಾಬಾದ್ ಕರ್ನಾಟಕದಲ್ಲಿ ಮೇಲೇರಿಯಾ ಬಂದೇ ಬರುತ್ತವೆ. ಸರ್ಕಾರಕ್ಕೆ, ಬೆಂಗಳೂರು ಜಲ ಮಂಡಳಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಯವರಿಗೆ ಈ ವಿಷಯ ಗೊತ್ತಿರಲಿಲ್ಲವೇ? ಈ ರೀತಿ ಫೆಬ್ರವರಿ ಮಾಚ್ ಬಂದರೆ ಕರುಳು ಬೇನೆ ರೋಗ ಬರುತ್ತದೆ, ಎಂದು ಮುಂಚಿತವಾಗಿ ಕ್ರಮ ತೆಗೆದುಕೊಳ್ಳಬೇಕೆಂಬ ಅರಿವು ಇರಲಿಲ್ಲವೇ? ಫೇಬ್ರವರಿ 23 ನೇ ತಾರೀಖಿನಿಂದ ಇದುವರೆಗೆ ಸುಮಾರು 239 ಜನ ಐಸೋಲೆಷನ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಅವರೆಲ್ಲರೂ ಕೊಳಚೆ ಪ್ರದೇಶಗಳಿಗೆ ಸೇರಿದ ಜನ. ಒಂದು ಕಡೆ, ಕೊಳಚೆ ಪ್ರದೇಶಗಳಿಗೆ ಸೇರಿದ ಜನ ಬೆಂಕಿ ಬಿದ್ದು ಮನೆ ಕಳೆದುಕೊಳ್ಳುತ್ತಾರೆ. ಇನ್ನೊಂದು ಕಡೆ ಕರುಳು ಬೇನೆ ಬಂದು ಜೀವ ನ್ಮರಣದ ಮಧ್ಯೆ ಉಯ್ಯಾಲೆ ಆಡುತ್ತಿದ್ದಾರೆ. ಇದು ಜಲ ಮಂಡಳಿ ಯವರ ತಪ್ಪು ಎಂದು ಬೆಂಗಳೂರು ನಗರ ಪಾಲಿಕೆಯವರು ಹೇಳುವುದು, ನಗರಪಾಲಿಯವರ ತಪ್ಪು ಎಂದು ಜಲ ಮಂಡಳಿಯವರು ಹೇಳುವುದು, ಹೀಗೆ ಪರಸ್ಪರ ಗೂಬೆ ಕೂರಿಸುವುದರಲ್ಲಿ ಅವರ ಸಮಯ ವ್ಯರ್ಥ ಮಾಡುತ್ತಿದ್ದಾರೆಯೇ ಹೊರತು ಅವರವರ ಕೆಲಸ ಮಾಡುತ್ತಿಲ್ಲ ಫೆಬ್ರವರಿ ಮಾರ್ಚ್‌ನಲ್ಲಿ ಕರುಳು ಬೇನೆ ಬರುತ್ತದೆ ಎಂದು ಅವರಿಗೆ ಗೊತ್ತು. ಸಾಮಾನ್ಯವಾಗಿ ಯಾವ ಜಾಗದಲ್ಲಿ ಯಾವ ಕೊಳಚೆ ಪ್ರದೇಶದಲ್ಲಿ ಬರುತ್ತದೆ ಎಂದು ಅಂಕಿ ಅಂಶ ಇದೆ. ಹಣ್ಣುಗಳನ್ನು ಕತ್ತರಿಸಿ ಮಾರುವುದು ಇರಬಹುದು, ಕುಡಿಯುವ ನೀರು ಮತ್ತು ಒಳಚರಂಡಿ ನೀರು ಮಿಕ್ಸ್ ಆಗಿ ಬರುವುದು ಇರಬಹುದು, ಈ ಕಾರಣಗಳಿಂದ ಈ ಕಾಯಿಲೆಗಳು ಬರುವುದು ಚೆನ್ನಾಗಿ ಗೊತ್ತಿದೆ. ನಾನು ಒಬ್ಬರಿಗೆ ವಿದೇಶದಲ್ಲಿ ಏನಪ್ಪ ನೋಡಿದೆ ಎಂದರೆ, '' ಉದರ್ ಪೀನೆಕಾ ಪಾನಿ ಅಲಗ್, ಗಟರ್‌ಕ ಪಾನಿ ಅಲಗ್'' ಎಂದು ಹೇಳುತ್ತಾನೆ. ಇಲ್ಲಿ ಎರಡೂ ಒಂದೇ ಆಗುತ್ತಿದೆ. ಅಧ್ಯಕ್ಷರ ಮೂಲಕ ಈ ಸರ್ಕಾರವನ್ನು ನಾನು ಕೇಳುವುದು, ಈ ಕರುಳು ಬೇನೆ ರೋಗ ನಿಲ್ಲಿಸುವುದಕ್ಕೆ ಸಮರೋಪಾದಿಯಾಗಿ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈಗ ತೆಗೆದುಕೊಳ್ಳುವುದು ಮಾತ್ರವಲ್ಲ. ನಾನು ಹೊಸ ಸರ್ಕಾರ ಬಂದ ಮೇಲೆ. ಅದು ತನ್ನ ಅಜೆಂಡಾ ಕೊಟ್ಟ ಮೇಲೆ ಈಗಲಾದರೂ, ಕೂಡ ಬೆಂಗಳೂರು ಜಲ ಮಂಡಳಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆ, ಈ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತದೆ. ಈ ಕಾಯಿಲೆಯನ್ನು ತಡೆಯುತ್ತದೆ. ಎಂದು ಆಶಿಸಿದ್ದೆ. ಹೋದ ವರ್ಷ ಏನಾಗಿತ್ತು ಅದೇ ತರಹ ಈಗಲೂ ಆಗುತ್ತಿದೆ. ಈ ಕರುಳು ಬೇನೆ ರೋಗವನ್ನು ತಡೆಯುವುದಕ್ಕೆ ನಿಜವಾಗಿ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?